**ಪೊಲೀಸ್ ಮಹಾ ನಿರ್ದೇಶಕರು ಹಾಗೂ**
**ಮಹಾ ನಿರ್ದೇಶಕರು**
ಕರ್ನಾಟಕ ಅಗ್ನಿಶಾಮಕ ಮತ್ತು
ತುರ್ತು ಸೇವೆಗಳು ಹಾಗೂ ರಾಜ್ಯ ವಿಪತ್ತು
ನಿರ್ವಹಣಾ ಪಡೆಯ ನಿರ್ದೇಶನಾಲಯ
ನಂ.1, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ
ಬೆಂಗಳೂರು-560 042

ದೂರವಾಣಿ : 25570733
22971501
ಫ್ಯಾಕ್ಸ್ : 22971512

ಸಂಖ್ಯೆ:ಜಿಬಿಸಿ(1)198/2013
(Docket No.KSFES/CC/114/2017)

29-06-2017

**ಗೆ,**
**ಆಯುಕ್ತರು,**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,**
**ಎನ್.ಆರ್.ಚೌಕ,**
**ಬೆಂಗಳೂರು – 560 002.**

ಮಾನ್ಯರೆ,

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಹರಳೂರು ಗ್ರಾಮದ ಸರ್ವೆ ನಂ.71, 89, 90, 91/1, 91/2, 94/1 & 94/3 ರಲ್ಲಿ ನಿರ್ಮಿಸಿರುವ ಬಹುಮಹಡಿ ವಸತಿ ಕಟ್ಟಡಗಳ ಸ್ವಾಧೀನತೆ ಪಡೆಯಲು ಕ್ಲಿಯರೆನ್ಸ್ ಪತ್ರ ನೀಡುವ ಬಗ್ಗೆ.

ಉಲ್ಲೇಖ:-1) ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ನಿರಾಕ್ಷೇಪಣಾ ಪತ್ರ ಸಂ. ಜಿಬಿಸಿ(1)198/2013 ದಿನಾಂಕ 17-01-2015.
2) ಮೆ: ಫರ್ನ್ಸ್ ಬಿಲ್ಡರ್ಸ್ & ಡೆವಲಪರ್ಸ್, ಬೆಂಗಳೂರು ರವರ ಪತ್ರ ದಿನಾಂಕ 17-01-2015.

^^^^^^^^^

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಹರಳೂರು ಗ್ರಾಮದ ಸರ್ವೆ ನಂ.71, 89, 90, 91/1, 91/2, 94/1 & 94/3 ರಲ್ಲಿ 44.95 ಮೀಟರ್ ಎತ್ತರದ ತಳಹಂತ, ನೆಲಹಂತ ಮತ್ತು 14 ಮೇಲಂತಸ್ತುಗಳನ್ನು ಹೊಂದಿರುವ 3 ವಿಂಗ್‌ಗಳ (ವಿಂಗ್-ಎ, ಬಿ & ಸಿ) ಪಾರ್ಟ್-ಎ, 44.95 ಮೀಟರ್ ಎತ್ತರದ ತಳಹಂತ, ನೆಲಹಂತ ಮತ್ತು 14 ಮೇಲಂತಸ್ತುಗಳನ್ನು ಹೊಂದಿರುವ 3 ವಿಂಗ್‌ಗಳ (ವಿಂಗ್-ಡಿ, ಇ & ಎಫ್) ಪಾರ್ಟ್-ಬಿ ಹಾಗೂ ತಳಹಂತ ಮತ್ತು 4 ಮೇಲಂತಸ್ತುಗಳನ್ನು ಹೊಂದಿರುವ ಪಾರ್ಟ್-ಸಿ (ಕ್ಲಬ್ ಹೌಸ್) ಒಟ್ಟು 3 ಪಾರ್ಟ್‌ಗಳ ಕಟ್ಟಡ-1 ಮತ್ತು 44.95 ಮೀಟರ್ ಎತ್ತರದ ತಳಹಂತ, ನೆಲಹಂತ ಮತ್ತು 14 ಮೇಲಂತಸ್ತುಗಳನ್ನು ಹೊಂದಿರುವ ಕಟ್ಟಡ-2 (ಪಾರ್ಟ್-ಡಿ) ಬಹುಮಹಡಿ ವಸತಿ ಕಟ್ಟಡಗಳನ್ನು ನಿರ್ಮಿಸಲು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ದಿನಾಂಕ 17-01-2015 ರಂದು ಪರಿಷ್ಕೃತ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

ಪ್ರಸ್ತುತ ಕಟ್ಟಡದ ನಿರ್ಮಾಪಕರಾದ ಮೆ: ಫರ್ನ್ಸ್ ಬಿಲ್ಡರ್ಸ್ & ಡೆವಲಪರ್ಸ್ ರವರು, ತಮ್ಮ ಉಲ್ಲೇಖಿತ ಪತ್ರದಲ್ಲಿ, ಸದರಿ ಬಹುಮಹಡಿ ಕಟ್ಟಡಗಳ ಪೈಕಿ 3 ಪಾರ್ಟ್‌ಗಳ ಕಟ್ಟಡ-1 ರ ನಿರ್ಮಾಣ ಹಾಗೂ ಅಗ್ನಿಶಮನ ಉಪಕರಣಗಳ ಅಳವಡಿಕೆ ಕಾರ್ಯ ಮುಗಿದಿದ್ದು, ಅದರ ಸ್ವಾಧೀನತೆಯನ್ನು ಪಡೆಯಲು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಕ್ಲಿಯರೆನ್ಸ್ ಪತ್ರ ನೀಡುವಂತೆ ಕೋರಿರುತ್ತಾರೆ.

ಕಟ್ಟಡದ ನಿರ್ಮಾಪಕರ ಕೋರಿಕೆಯಂತೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಧಿಕಾರಿಗಳು ದಿನಾಂಕ 06-04-2017 ರಂದು ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಹರಳೂರು ಗ್ರಾಮದ ಸರ್ವೆ ನಂ.71, 89, 90, 91/1, 91/2, 94/1 & 94/3 ರಲ್ಲಿ ನಿರ್ಮಿಸಿರುವ 3 ಪಾರ್ಟ್‌ಗಳ ಕಟ್ಟಡ-1 ಬಹುಮಹಡಿ ವಸತಿ ಕಟ್ಟವನ್ನು ನಿರೀಕ್ಷಣೆ ಮಾಡಿ, ಸದರಿ ಕಟ್ಟಡದಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ಮಾಡಿರುವ ಎಲ್ಲಾ ಸಲಹೆ ಹಾಗೂ ಶಿಫಾರಸ್ಸುಗಳನ್ನು ಪೂರ್ಣ ಅನುಷ್ಟಾನಗೊಳಿಸಿರುವುದಾಗಿ, ಅದರಲ್ಲಿ ವಾಸಿಸುವ ನಿವಾಸಿ/ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತ ತರಬೇತಿ ಮಾತ್ರ ಬಾಕಿಯಿದ್ದು, ಕಟ್ಟಡದ ಸ್ವಾಧೀನತೆಯ ತರುವಾಯ ತರಬೇತಿ ನೀಡಲು ಸಾದ್ಯವಾಗುತ್ತದೆಂದು ತಿಳಿಸಿರುತ್ತಾರೆ.

ಆದ್ದರಿಂದ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಹರಳೂರು ಗ್ರಾಮದ ಸರ್ವೆ ನಂ.71, 89, 90, 91/1, 91/2, 94/1 & 94/3 ರಲ್ಲಿ ನಿರ್ಮಿಸಿರುವ **44.95 ಮೀಟರ್ ಎತ್ತರದ ತಳಹಂತ, ನೆಲಹಂತ ಮತ್ತು 14 ಮೇಲಂತಸ್ತುಗಳನ್ನು ಹೊಂದಿರುವ 3 ವಿಂಗ್‌ಗಳ (ವಿಂಗ್-ಎ, ಬಿ & ಸಿ) ಪಾರ್ಟ್-ಎ, 44.95 ಮೀಟರ್ ಎತ್ತರದ ತಳಹಂತ, ನೆಲಹಂತ ಮತ್ತು 14 ಮೇಲಂತಸ್ತುಗಳನ್ನು ಹೊಂದಿರುವ 3 ವಿಂಗ್‌ಗಳ (ವಿಂಗ್-ಡಿ, ಇ & ಎಫ್) ಪಾರ್ಟ್-ಬಿ ಹಾಗೂ ತಳಹಂತ ಮತ್ತು 4 ಮೇಲಂತಸ್ತುಗಳನ್ನು ಹೊಂದಿರುವ ಪಾರ್ಟ್-ಸಿ (ಕ್ಲಬ್ ಹೌಸ್) ಒಟ್ಟು 3 ಪಾರ್ಟ್‌ಗಳ ಕಟ್ಟಡ-1 ಬಹುಮಹಡಿ ವಸತಿ ಕಟ್ಟಡಗಳಿಗೆ ಮಾತ್ರ** ಸ್ವಾಧೀನತಾ ಪ್ರಮಾಣ ಪತ್ರ ಪಡೆಯಲು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ನಿರಾಕ್ಷೇಪಣಾ ಪತ್ರ ಸಂಖ್ಯೆ ಜಿಬಿಸಿ(1)198/2013 ದಿನಾಂಕ 17-01-2015 ರಲ್ಲಿ ತಿಳಿಸಿರುವಂತೆ, ಅಗ್ನಿರಕ್ಷಣೆ ಮತ್ತು ನಿಯಂತ್ರಣ ಹಾಗೂ ಅಗ್ನಿನಂದಿಸುವ ಉಪಕರಣಗಳ ಸಂರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಹಾಗೂ ಅಗ್ನಿಶಮನ ಉಪಕರಣಗಳನ್ನು ಸುಸ್ಥಿತಿಯಲ್ಲಿಡಬೇಕೆಂಬ ಷರತ್ತಿನ ಮೇಲೆ ಸ್ವಾಧೀನತಾ ಪ್ರಮಾಣ ಪತ್ರ ನೀಡಲು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಯಾವ ಆಕ್ಷೇಪಣೆ ಇಲ್ಲವೆಂದು ತಿಳಿಸಿದೆ.

**ಅಲ್ಲದೆ ಕಟ್ಟಡ ನಿರ್ಮಾಪಕರು ದಿನಾಂಕ 17-06-2017 ರ ಮುಚ್ಚಳಿಕೆ ಪತ್ರದಲ್ಲಿ ಒಪ್ಪಿರುವಂತೆ, ಕಟ್ಟಡದಲ್ಲಿನ ಶೇಕಡಾ 40 ರಷ್ಟು ಸಿಬ್ಬಂದಿ/ನಿವಾಸಿಗಳಿಗೆ ಅಗ್ನಿರಕ್ಷಣೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ, ಬೆಂಗಳೂರಿನ ಆರ್.ಎ.ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿಯಲ್ಲಿ ಸೂಕ್ತ ತರಬೇತಿಯನ್ನು 6 ತಿಂಗಳೊಳಗೆ ಪಡೆಯಲು ವ್ಯವಸ್ಥಿಸಬೇಕೆಂಬ ಷರತ್ತಿಗೊಳಪಟ್ಟಿದೆ.**

**ಮುಂದಿನ ನವೀಕರಣದ ಮುಂಚಿತವಾಗಿ ರಾಷ್ಟ್ರೀಯ ಕಟ್ಟಡ ಸಂಹಿತೆ ನಿಯಮ ಸಿ.1.8 ಪ್ರಕಾರ Compartmentation, 4.6.2ರ ಪ್ರಕಾರ Smoke exhaust and pressurization areas below ground ಮತ್ತು 4.15.1 ರ ಪ್ರಕಾರ ಫೈರ್ ಲಿಫ್ಟ್ (Fire fighting lift should be provided with a ceiling hatch for use incase of emergency, so that when the car gets stuck up, it shall be easily openable) ಕ್ರಮಗಳನ್ನು ಮತ್ತು ಅವಶ್ಯವಿರುವ ಸೂಕ್ತ ಅಗ್ನಿನಂದಕಗಳನ್ನು ಅಳವಡಿಸಬೇಕೆಂದು ಹಾಗೂ ರಾಷ್ಟ್ರೀಯ ಕಟ್ಟಡ ಸಂಹಿತೆಯ ಇತರೆ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂಬ ಷರತ್ತನ್ನು ವಿಧಿಸಲಾಗಿದೆ.**

**ಅಲ್ಲದೆ ಸದರಿ ಕಟ್ಟಡಗಳ ಆವರಣದ ಯಾವುದೇ ಭಾಗದಲ್ಲಿ ಎಲ್‌ಪಿಜಿ ಅಥವಾ ಹೆಚ್‌ಎಸ್‌ಡಿ ಇತ್ಯಾದಿಗಳನ್ನು ಶೇಖರಣೆ ಮಾಡಲು ಉದ್ದೇಶಿಸಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯತಕ್ಕದ್ದು.**

ಈ ಕ್ಲಿಯರೆನ್ಸ್ ಪತ್ರವು ಸರ್ಕಾರಿ ಆದೇಶ ಸಂ.ಒಇ 33 ಕಅಸೇ 2011 ದಿನಾಂಕ 07-07-2011 ರಂತೆ, ಈ ದಿನಾಂಕದಿಂದ ಮುಂದಿನ 2 ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ. ತದನಂತರ ಈ ಕ್ಲಿಯರೆನ್ಸ್ ಪತ್ರವನ್ನು ನವೀಕರಿಸುವಂತೆ ತಿಳಿಸಲಾಗಿದೆ.

DGP & DIRECTOR GENERAL
KARNATAKA FIRE & EMERGENCY SERVICES
BANGALORE
560 042

**ಇನ್ನುಳಿದ ಕಟ್ಟಡ-2 (ಫಾರ್ಟ್-ಡಿ) ಬಹುಮಹಡಿ ವಸತಿ ಕಟ್ಟಡದ ನಿರ್ಮಾಣ ಕಾರ್ಯ ಮತ್ತು ಅಗ್ನಿಶಮನ ಹಾಗೂ ಅಗ್ನಿ ನಿವಾರಣೆ ಉಪಕರಣಗಳ ಅಳವಡಿಕೆ ಪೂರ್ಣಗೊಂಡ ತರುವಾಯ ಅವುಗಳ ಸ್ವಾಧೀನತೆ ಪಡೆಯಲು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಕ್ಲಿಯರೆನ್ಸ್ ಪತ್ರ ಪಡೆಯಲು ಅರ್ಜಿದಾರರಿಗೆ ಷರತ್ತು ವಿಧಿಸಲು ಕೋರಿದೆ.**

ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಕಟ್ಟಡದಲ್ಲಿ ಇಲಾಖಾ ಶಿಫಾರಸ್ಸಿನನ್ವಯ ಅಳವಡಿಸಿರುವ ಅಗ್ನಿನಿವಾರಣೆ ಹಾಗೂ ಅಗ್ನಿಶಮನದ ಉಪಕರಣಗಳು ಸುಸ್ಥಿತಿಯಲ್ಲಿ ಇಲ್ಲದೇ ಇರುವುದು ಕಂಡು ಬಂದರೆ ಅಥವಾ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ಅಥವಾ **ಕಾನೂನಿನ್ವಯ ಬಿಟ್ಟಿರುವ ತೆರೆದ ಪ್ರದೇಶದಲ್ಲಿ ಅಥವಾ ಕಟ್ಟಡದ ರಚನೆಯಲ್ಲಿ ಯಾವುದೇ ಹೆಚ್ಚುವರಿ ನಿರ್ಮಾಣ ಮಾಡಿದರೆ**, ಅಥವಾ ಯಾವುದೇ ರೀತಿ ಖಾಯಂ/ತಾತ್ಕಾಲಿಕ ಅಡಚಣೆಗಳನ್ನುಂಟು ಮಾಡಿದರೆ, ಈ ಕ್ಲಿಯರೆನ್ಸ್ ಪತ್ರ ಅನೂರ್ಜಿತಗೊಳ್ಳುವುದು ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

DGP & DIRECTOR GENERAL ★ KARNATAKA FIRE & EMERGENCY SERVICES ★ BANGALORE 560 042

ತಮ್ಮ ವಿಶ್ವಾಸಿ,

**ಪೋಲೀಸ್ ಮಹಾ ನಿರ್ದೇಶಕರು**
**ಹಾಗೂ ಮಹಾ ನಿರ್ದೇಶಕರು,**
**ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು.**

ಪ್ರತಿ:

1. ಮೆ: ಫರ್ನ್ಸ್ ಬಿಲ್ಡರ್ಸ್ & ಡೆವಲಪರ್ಸ್, ಸಂಖ್ಯೆ:682, 9ನೇ ಎ ಮೇನ್, ಇಂದಿರನಗರ, ಮೊದಲನೇ ಹಂತ, ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ ಎದರು, ಬೆಂಗಳೂರು-560038.

2) ಮುಖ್ಯ ಅಗ್ನಿಶಾಮಕ ಅಧಿಕಾರಿ, ಬೆಂಗಳೂರು ಪೂರ್ವ